ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ-೧೬೦ Volume-160	ಮೈಸೂರು, ಬುಧವಾರ, ೦೩, ಡಿಸೆಂಬರ್ , ೨೦೨೫ (ಮಾರ್ಗಶಿರಾ , ೧೨, ಶಕವರ್ಷ, ೧೯೪೭) MYSURU, WEDNESDAY, 03, DECEMBER , 2025 (MARGASHIRA, 12, SHAKAVARSHA, 1947)	ಸಂಚಿಕೆ-೫೨ Issue –52

ಭಾಗ ೬ಎ

ಮೈಸೂರು ವಿಭಾಗಕ್ಕೆ ಮತ್ತು ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ದಕ್ಷಿಣಕನ್ನಡ, ಕೊಡಗು, ಚಾಮರಾಜನಗರ, ಉಡುಪಿ ಜಿಲ್ಲೆಗಳಿಗೆ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಯವರ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ.

ದೂರವಾಣಿ ಸಂಖ್ಯೆ: **08172-267345, 265028, 253345,** ಫ್ಯಾಕ್ಸ್ ಸಂಖ್ಯೆ: **08172-265418**

E-mail: dchasn@bsnl.in **E-mail:dcoffice.hassan@gmail.com.**

ನಮೂನೆ-V

[ಕರ್ನಾಟಕ ತಿದ್ದುಪಡಿ ನಿಯಮ-5, 20(1) (ಬಿ)]

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತಪರಿಹಾರದ ಹಕ್ಕು, ಪುನರ್ವಸತಿ ಹಾಗೂ ಪುನರ್ ನಿರ್ಮಾಣಕಾಯ್ದೆ 2013ರ, ಕಲಂ – 11(1) ಮೇರೆಗೆ (ಹೆಚ್ಚುವರಿ)

ಸಂಖ್ಯೆ:-ಭೂಸ್ವಾ/48/2024-25 **ದಿನಾಂಕ:- 04- 09-2025**

ಸಾರ್ವಜನಿಕ ಉದ್ದೇಶದ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಗಾಗಿ ಹಾಸನ ಜಿಲ್ಲೆಯ **ಸಕಲೇಶಪುರ ತಾಲ್ಲೂಕಿನ ಕಸಬಾ ಹೋಬಳಿ ಹೆಬ್ಬಸಾಲೆ** ಗ್ರಾಮದಲ್ಲಿ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿ**ರುವ ಒಟ್ಟು 1 ಎಕರೆ 10** ಗುಂಟೆ ಜಮೀನುಗಳ ಸ್ವಾಧೀನತೆಯ ಅವಶ್ಯಕತೆಯಿರುತ್ತದೆಯೆಂದು ಸರ್ಕಾರವು ಭಾವಿಸುತ್ತದೆ. ಕೇಂದ್ರ ಅಧಿನಿಯಮ ಭೂಸ್ವಾಧೀನ ಪ್ರಕ್ರಿಯೆ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ–2013 ಕಲಂ (4) ರಲ್ಲಿ ತಿಳಿಸಿರುವಂತೆ ಮೇಲ್ಕಂಡ **ಹೆಬ್ಬಸಾಲೆ ಗ್ರಾಮಕ್ಕೆ** ಸಾಮಾಜಿಕ ಪರಿಣಾಮ ನಿರ್ದರಣೆಯ

(೯೩೪)

ಅಧ್ಯಯನ ವರದಿ ತಯಾರಿಸಲಾಗಿರುತ್ತದೆ. **ಹೆಬ್ಬಸಾಲೆ** ಗ್ರಾಮಕ್ಕೆ ಸಂಬಂಧಿಸಿದಂತೆ, ಮತ್ತು ಈ ಯೋಜನೆಗೆ **ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ–2013** (2013ರ ಕೇಂದ್ರ ಅಧಿನಿಯಮ ಸಂಖ್ಯೆ:30)ಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ದಿನಾಂಕ:23–07–2019 ರಿಂದ ಜಾರಿಗೆ ಬಂದಿರುವ **ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ–2019** (2019 ರ ಕರ್ನಾಟಕ ಅಧಿನಿಯಮ ಸಂಖ್ಯೆ 16) ರ ಕಲಂ–10(ಎ)ರಡಿ ಮೂಲ ಕಾಯ್ದೆಯ ಅಧ್ಯಾಯ–11 & 111 ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ಇರುತ್ತದೆ. **ಸರ್ಕಾರದ ಆದೇಶ ಸಂಖ್ಯೆ ಕಂ.ಇ91 ಎಕ್ಯೂಹೆಚ್ 2024 ದಿನಾಂಕ:–31–05–2025** ರಂದು ವಿನಾಯಿತಿ ಆದೇಶ ಸಹ ಪಡೆಯಲಾಗಿದೆ.

ಆದುದರಿಂದ ಈ ಮೂಲಕ ತಿಳಿಸುವುದೇನೆಂದರೆ **ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ–2013** (2013 ರ ಕೇಂದ್ರ ಅಧಿನಿಯಮ ಸಂಖ್ಯೆ: 30) ರ ಕಲಂ–12 ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ವಿಶೇಷ ಭೂಸ್ವಾಧೀನಾಧಿಕಾರಿಗಳು, ಎತ್ತಿನಹೊಳೆ ಯೋಜನೆ, ಹಾಸನ ಇವರಿಗೆ ಅಧಿಕಾರ ನೀಡಲಾಗಿದೆ.

ಈ ಜಮೀನುಗಳ ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಗಲಿ ಅಥವಾ ಈ ಕೆಲಸ ಮಾಡುವವರಿಗಾಗಲೀ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. **ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ–2013** (2013 ರ ಕೇಂದ್ರ ಅಧಿನಿಯಮ ಸಂಖ್ಯೆ: 30) ರ ಕಲಂ–11(1) ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನೂ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದಂತೆ ನಿರ್ಭಂದಿಸಿದೆ, ಅಂತಹ ಯಾವುದೇ ಕ್ರಮ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಲ್ಲಿ ಅದನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ–2013 (2013 ರ ಕೇಂದ್ರ ಅಧಿನಿಯಮ ಸಂಖ್ಯೆ: 30) ರ ಕಲಂ–15(1) ಮೇರೆಗೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪವಿದ್ದಲ್ಲಿ, ಆಕ್ಷೇಪಣೆಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನಗಳೊಳಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಬೇಕು. ತದನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇಯಕ್ಕೆ ಹಾಕಲಾಗುವುದು.

ಸದರಿ ಪ್ರಕರಣದಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಜಮೀನಿನ ಒಂದು ನಕ್ಷೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು, ಎತ್ತಿನಹೊಳೆ ಯೋಜನೆ, ಹಾಸನ ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

ಈ ಯೋಜನೆಯು ಕಲಂ–40(2)ರ ವ್ಯಾಪ್ತಿಗೆ ಒಳಪಡುವುದರಿಂದ ಮತ್ತು ಅತ್ಯಂತ ಜರೂರಾಗಿ ಭೂಮಿಯ ಅವಶ್ಯಕತೆ ಇರುವುದರಿಂದ ಮತ್ತು ಅದಕ್ಕೆ ಸಂಸತ್ತಿನ ಅನುಮೋದನೆ ಇರುವುದರಿಂದ ಸರ್ಕಾರದ ಅಧಿಸೂಚನೆ ಸಂಖ್ಯೆ ಕಂ.ಇ.04 ಎಕ್ಯೂಬಿ. 2020 ದಿನಾಂಕ:28–03–2022 ರನ್ವಯ ಸ್ವಾಧೀನಕ್ಕೆ ಪಡೆಯಲು ತೀರ್ಮಾನಿಸಲಾಗಿದೆ.}

ಅನುಸೂಚಿ

ತಾಲ್ಲೂಕು: ಸಕಲೇಶಪುರ **ಹೋಬಳಿ: ಕಸಬಾ** **ಗ್ರಾಮ:ಹೆಬ್ಬಸಾಲೆ**

ಕ್ರ.ಸಂ	ಖಾತೆದಾರರ ಹೆಸರು (ಪಹಣಿಯಲ್ಲಿ ನಮೂದಾಗಿರುವಂತೆ)		ಸರ್ವೆ/ ಖಾತಾ ನಂಬರ್	ಸರ್ವೆ/ಖಾತಾ ನಂಬರದಲ್ಲಿನ ಆಕಾರ್ ಬಂದ್ ನಂತೆ ಒಟ್ಟು ವಿಸ್ತೀರ್ಣ (ಪಹಣಿ/ ಉತಾರ ರನ್ವಯ)		ಸ್ವಾಧೀನಕ್ಕೊಳಪಡುವ ಒಟ್ಟು ವಿಸ್ತೀರ್ಣ		ತರಹೆ	ಚೆಕ್ಕು ಬಂದಿ/ಸರಹದ್ದು				ಷರಾ
	ಭೂಮಾಲೀಕರ/ ಅನುಭವದಾರರ ಹಿಡುವಳಿದಾರರ ಹೆಸರು	ಅನುಭವದಾರರ ಹೆಸರು		ಕೃಷಿ/ಕೃಷಿಯೇತರ	ಖರಾಬು	ಕೃಷಿ/ಕೃಷಿಯೇತರ	ಖರಾಬು		ಪೂ	ಪ	ಉ	ದ	
1	2	3	4	5	6	7	8	9	10	11	12	13	14
1	ಆಲೀಸ್ ಕೆ.ಜೋಶ್ ಕೋಂ ಕೆ.ಎಂ.ಜೋಶ್	ಆಲೀಸ್ ಕೆ.ಜೋಶ್ ಕೋಂ ಕೆ.ಎಂ.ಜೋಶ್	241	1–10	–	1–10	–	ಖುಷ್ಕಿ	ಸ.ನಂ 251	ಸ.ನಂ 250	ಸ.ನಂ 450	ಸ.ನಂ 241	

ಘೋಷ್ವಾರೆ:

ಕ್ರ.ಸಂ	ಗ್ರಾಮದ ಹೆಸರು	ಖುಷ್ಕಿ ಎ/ಗುಂ	ತರಿ/ಭಾಗಾಯ್ತು ಎ/ಗುಂ	ಪ್ಲಾಂಟೇಷನ್ ಎ/ಗುಂ	ಕೆರೆ	ಒಟ್ಟು
1	ಹೆಬ್ಬಸಾಲೆ	1–10	–	–	–	1–10
	ಒಟ್ಟು	**1–10**	–	–	–	**1–10**

ಜಿಲ್ಲಾಧಿಕಾರಿ,
ಹಾಸನ ಜಿಲ್ಲೆ, ಹಾಸನ.

PR-245

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಹಾಸನ

ನಮೂನೆ-V

[ಕರ್ನಾಟಕ ತಿದ್ದುಪಡಿ ನಿಯಮ-5, 20(1) (ಬಿ)]

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013 ರ ಕಲಂ-11(1) ಮೇರೆಗೆ (ಹೆಚ್ಚುವರಿ)

ಸಂಖ್ಯೆ: ಭೂಸ್ವಾಧೀನ(ರೈಲ್ವೆ)02/2023-24 **ದಿನಾಂಕ: 28-05-2025**

ಸಾರ್ವಜನಿಕ ಉದ್ದೇಶದ **ಆಲೂರು- ಬೇಲೂರು ಹೊಸ ಬ್ರಾಡ್ ಗೇಜ್ ರೈಲ್ವೆ** ಯೋಜನೆಗಾಗಿ ಹಾಸನ ಜಿಲ್ಲೆಯ **ಆಲೂರು** ತಾಲ್ಲೂಕಿನ **ಗವಲಕಟ್ಟೆ** ಗ್ರಾಮದ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳ ಸ್ವಾಧೀನತೆಯ ಅವಶ್ಯಕತೆಯಿರುತ್ತದೆಯೆಂದು ಸರ್ಕಾರವು ಭಾವಿಸುತ್ತದೆ. ಈ ಯೋಜನೆಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸಿದಂತೆ ದಿನಾಂಕ: 23-07-2019 ರಿಂದ ಜಾರಿಗೆ ಬಂದಿರುವ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಪನರ್ ನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ-2019 (2019ರ ಕರ್ನಾಟಕ ಅಧಿನಿಯಮ ಸಂಖ್ಯೆ:16) ರ ಕಲಂ-10 (ಎ) ರಡಿ ಮೂಲ ಕಾಯ್ದೆಯ ಅಧ್ಯಾಯ-2&3 ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಿ ಸಂಖ್ಯೆ: **ಕಂಇ 05 ಎಕ್ಯೂಹೆಚ್ 2024** ದಿನಾಂಕ: **23-01-2024** ರ ಸರ್ಕಾರದ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಈ ಅಧಿಸೂಚನೆ ರಾಜ್ಯ ಪತ್ರದಲ್ಲಿ ದಿನಾಂಕ: **24-01-2024** ರಂದು ಪ್ರಕಟವಾಗಿರುತ್ತದೆ.

ಆದುದರಿಂದ ಈ ಮೂಲಕ ತಿಳಿಸುವುದೇನೆಂದರೆ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013(2013 ರ ಕೇಂದ್ರ ಅಧಿನಿಯಮ ಸಂಖ್ಯೆ: 30) ರ ಕಲಂ-12 ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ **ಭೂಸ್ವಾಧೀನಾಧಿಕಾರಿಗಳು ಹಾಗೂ ಉಪವಿಭಾಗಾಧಿಕಾರಿಗಳು, ಸಕಲೇಶಪುರ ಉಪವಿಭಾಗ, ಸಕಲೇಶಪುರ** ಇವರಿಗೆ ಅಧಿಕಾರ ನೀಡಲಾಗಿದೆ.

ಈ ಜಮೀನುಗಳ ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಗಲಿ ಅಥವಾ ಈ ಕೆಲಸ ಮಾಡುವವರಿಗಾಗಲೀ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30) ರ ಕಲಂ11(1) ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾದೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನೂ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದಂತೆ ನಿರ್ಬಂದಿಸಿದೆ. ಅಂತಹ ಯಾವುದೇ ಕ್ರಮ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಲ್ಲಿ ಅದನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30) ರ ಕಲಂ 15(1) ರ ಮೇರೆಗೆ ಆಸ್ತಕಿಯುಳ್ಳವರು ತಮ್ಮ ಆಕ್ಷೇಪವಿದ್ದಲ್ಲಿ, ಆಕ್ಷೇಪಣೆಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನಗೊಳಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಬೇಕು. ತದನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇಯಕ್ಕೆ ಹಾಕಲಾಗುವುದು.

ಸದರಿ ಪ್ರಕರಣದಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಜಮೀನಿನ ಒಂದು ನಕ್ಷೆಯನ್ನು **ಭೂಸ್ವಾಧೀನಾಧಿಕಾರಿಗಳು ಹಾಗೂ ಉಪವಿಭಾಗಾಧಿಕಾರಿಗಳ ಕಾರ್ಯಾಲಯ, ಸಕಲೇಶಪುರ ಉಪವಿಭಾಗ** ಇವರ ಕಾರ್ಯಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

ಭೂಸ್ವಾಧೀನಕ್ಕೆ ಒಳಪಡುತ್ತಿರುವ ವ್ಯಕ್ತಿವಾರು ಪ್ರಾಥಮಿಕ ವಿವರಗಳನ್ನು ಒಳಗೊಂಡಿರುವ ಅನುಸೂಚಿ ಈ ಕೆಳಕಂಡಂತೆ ಇರುತ್ತದೆ.

ಅನುಸೂಚಿ

ಜಿಲ್ಲೆ: ಹಾಸನ **ತಾಲ್ಲೂಕು: ಆಲೂರು** **ಹೋಬಳಿ: ಪಾಳ್ಯ** **ಗ್ರಾಮ: ಗವಲಕಟ್ಟೆ**

ಕ್ರ. ಸಂ	ಖಾತೆದಾರರು		ಸರ್ವೆ ನಂಬರ್	ಸರ್ವೆ ಖಾತಾ ನಂಬರದಲ್ಲಿನ ಒಟ್ಟು ವಿಸ್ತೀರ್ಣ (ಪಹಣಿ/ಉತ್ತಾರ ರನ್ವಯ)		ಸ್ವಾಧೀನಕ್ಕೊಳಪಡುವ ಒಟ್ಟು ವಿಸ್ತೀರ್ಣ		ತರಹ	ಚೆಕ್ಕ ಬಂದಿ / ಸರಹದ್ದು				ಷರಾ
	ಭೂಮಾಲೀಕರ / ಹಿಡುವಳಿದಾರರ ಹೆಸರು	ಅನುಭವದಾರರ ಹೆಸರು		ಕೃಷಿಯೇತರ (ಎಕರೆ/ಗುಂಟೆ)	ಖರಾಬು (ಎಕರೆ/ಗುಂಟೆ)	ಕೃಷಿಯೇತರ (ಎಕರೆ/ಗುಂಟೆ)	ಖರಾಬು (ಎಕರೆ/ಗುಂಟೆ)		ಪೂ	ಪ	ಉ	ದ	
1	2	3	4	5	6	7	8	9	10	11	12	13	14
1	ಜಯಮ್ಮ ಕೋಂ ರಂಗೇಗೌಡ	ಜಯಮ್ಮ ಕೋಂ ರಂಗೇಗೌಡ	37/1	01.24.00	00.00.00	01.07.00	00.00.00	ಖುಷ್ಕಿ	ಉಳಿಕೆ	ಲಾ.ನಂ 11	ಲಾ.ನಂ7	ಸ.ನಂ 12	ಭೂಮಾಪಕರು ಸ.ನಂ 37 ರಲ್ಲಿ ಒಟ್ಟು 1.07 ಎಕರೆ/ಗುಂಟೆ ವಿಸ್ತೀರ್ಣವು ಭೂಸ್ವಾಧೀನಕ್ಕೆ ಒಳಪಡುತ್ತಿರುತ್ತದೆ
	ತುಳಸಮ್ಮ ಕೋಂ ಲೇಟ್ ಕೃಷ್ಣೇಗೌಡ	ತುಳಸಮ್ಮ ಕೋಂ ಲೇಟ್ ಕೃಷ್ಣೇಗೌಡ	37/2	01.24.00	00.00.00				ಉಳಿಕೆ	ಲಾ.ನಂ 11	ಲಾ.ನಂ7	ಸ.ನಂ 12	

	ಕಲಾವತಿ ಕೋಂ ಲೇಟ್ ಹನುಮೇಗೌಡ	ಕಲಾವತಿ ಕೋಂ ಲೇಟ್ ಹನುಮೇಗೌಡ	37/3	0.32.00	0.00.00				ಉಳಿಕೆ	ಲಾ. ನಂ 11	ಲಾ. ನಂ7	ಸ.ನಂ 12	ಎಂದು ವರದಿ ನೀಡಿದ್ದು, ಜೆ.ಎಂ.ಸಿ ಕಾರ್ಯ ನಡೆಸುವಾಗ ನಿರ್ದಿಷ್ಟವಾಗಿ ಯಾವ ಪ್ರೋಡಿನಲ್ಲಿ ಎಷ್ಟು ವಿಸ್ತೀರ್ಣವು ರೈಲ್ವೆ ಯೋಜನೆಗೆ ಭೂಸ್ವಾಧೀನಕ್ಕೆ ಒಳಪಡುತ್ತಿರುತ್ತದೆ ಎಂದು ಗುರುತಿಸಲಾಗುವುದು
2	ಸರ್ಕಾರಿ ಗೋಮಾಳ	ಸರ್ಕಾರಿ ಗೋಮಾಳ	12	00.00.00	02.20.00	00.00.00	03.15.00	ಖರಾಬು	ಉಳಿಕೆ	ಉಳಿಕೆ	ಸ. ನಂ 37	ಉಳಿಕೆ	ಆಕಾರ್ ಬಂದ್ ವಿಸ್ತೀರ್ಣಕ್ಕು ಆರ್.ಟಿ.ಸಿ ವಿಸ್ತೀರ್ಣಕ್ಕು ತಾಳೆ ಇರುವುದಿಲ್ಲ, ಭೂಮಾಪಕರ ವರದಿಯಂತೆ ಸದರಿ ಸರ್ವೆ ನಂಬರ್ ನಲ್ಲಿ ಗೋಮಾಳದ ವಿಸ್ತೀರ್ಣ ಒಟ್ಟು 06.31.00 ಎಕರೆ/ಗುಂಟೆ ವಿಸ್ತೀರ್ಣವು ರೈಲ್ವೆ ಯೋಜನೆಗೆ ಭೂಸ್ವಾಧೀನಕ್ಕೆ ಒಳಪಡುತ್ತಿರುತ್ತದೆ ಎಂದು ವರದಿ ನೀಡಿದ್ದು, ಒಂದಕ್ಕೊಂದು ತಾಳೆ ಇಲ್ಲದೇ ಇರುವ ಕಾರಣ ಜೆ.ಎಂ.ಸಿ ಕಾರ್ಯ ನಡೆಸುವಾಗ ಪರಿಶೀಲಿಸಲಾಗುವುದು
3	ಬಸವರಾಜು ಬಿನ್ ಲೇಟ್ ಜವರಶೆಟ್ಟಿ	ಬಸವರಾಜು ಬಿನ್ ಲೇಟ್ ಜವರಶೆಟ್ಟಿ	12	04.00.00	00.00.00	02.10.00	00.00.00	ಖುಷ್ಕಿ	ಉಳಿಕೆ	ಉಳಿಕೆ	ಸ. ನಂ 37	ಉಳಿಕೆ	ಅರ್ಜಿದಾರರಾದ ಶ್ರೀ. ಲೋಕೇಶ್ ಜಿ.ಬಿ ಬಿನ್ ಬಸವರಾಜು ರವರು ತಕರಾರು ಸಲ್ಲಿಸಿದ್ದು, ಘನ ಹಾಸನದ 2ನೇ

													ಅಧಿಕ ಹಿರಿಯ ಸಿವಿಲ್ ನ್ಯಾಯಾಲಯ(ಹಿ.ವಿ) ದಲ್ಲಿ ದಾವಾ ಸಂಖ್ಯೆ: 18/2022, ದಿನಾಂಕ: 11-01-2022 ರಂತೆ ಆದೇಶವಾಗಿದ್ದು, ಸದರಿ ಆದೇಶದಂತೆ ಕ್ರಮವಹಿಸಬೇಕಾಗಿ ಅರ್ಜಿ ಸಲ್ಲಿಸಿದ್ದು, ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು
4	ಸರ್ಕಾರಿ ಗೋಮಾಳ	ಸರ್ಕಾರಿ ಗೋಮಾಳ	12	00.00.00	02.20.00	00.00.00	3.16.00	ಖರಾಬು	ಉಳಿಕೆ	ಉಳಿಕೆ	ಸ.ನಂ 37	ಉಳಿಕೆ	ಆಕಾರ್ ಬಂದ್ ವಿಸ್ತೀರ್ಣಕ್ಕೂ ಆರ್.ಟಿ.ಸಿ ವಿಸ್ತೀರ್ಣಕ್ಕೂ ತಾಳೆ ಇರುವುದಿಲ್ಲ, ಭೂಮಾಪಕರ ವರದಿಯಂತೆ ಸದರಿ ಸರ್ವೆ ನಂಬರ್ ನಲ್ಲಿ ಗೋಮಾಳದ ವಿಸ್ತೀರ್ಣ ಒಟ್ಟು 06.31.00 ಎಕರೆ/ಗುಂಟೆ ವಿಸ್ತೀರ್ಣವು ರೈಲ್ವೆ ಯೋಜನೆಗೆ ಭೂಸ್ವಾಧೀನಕ್ಕೆ ಒಳಪಡುತ್ತಿರುತ್ತದೆ ಎಂದು ವರದಿ ನೀಡಿದ್ದು, ಒಂದಕ್ಕೊಂದು ತಾಳೆ ಇಲ್ಲದೇ ಇರುವ ಕಾರಣ ಜೆ.ಎಂ.ಸಿ ಕಾರ್ಯ ನಡೆಸುವಾಗ ಪರಿಶೀಲಿಸಲಾಗುವುದು
ಒಟ್ಟು				**08.00.00**	**02.20.00**	**03.17.00**	**06.31.00**						

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without preayment WPP No. 297

ಫೋಷ್ಪಾರೆ

ಕ್ರ.ಸಂ	ಹೋಬಳಿ	ಗ್ರಾಮ	ಸ.ನಂ	ತರಹೆ	ವಿಸ್ತೀರ್ಣ(ಎಕರೆ/ಗುಂಟೆ	ಖರಾಬು ವಿಸ್ತೀರ್ಣ(ಎಕರೆ/ಗುಂಟೆ)
1	ಪಾಳ್ಯ	ಗವಲಕಟ್ಟೆ	37/1,2,3 ಹಾಗೂ 12	ಖುಷ್ಕಿ	03.17.00	00.00.00
				ಖರಾಬು	00.00.00	06.31.00
ಒಟ್ಟು					**03.17.00**	**06.31.00**

ಭೂಸ್ವಾಧೀನಾಧಿಕಾರಿಗಳು/ಉಪವಿಭಾಗಾಧಿಕಾರಿಗಳು
ಸಕಲೇಶಪುರ ಉಪವಿಭಾಗ
ಸಕಲೇಶಪುರ

ಜಿಲ್ಲಾಧಿಕಾರಿಗಳು
ಹಾಸನ ಜಿಲ್ಲೆ
ಹಾಸನ

PR-246

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಮೈಸೂರು.

VIJAY NELAMANGALA MUNIDALAPPA

Digitally signed by VIJAY NELAMANGALA MUNIDALAPPA
DN: c=IN, o=E-PROCUREMENT CELL CEG, 2.5.4.20=588b7cb3fea32bf043f6123186566952 9a569e29a3f077a76878b32da7621141, postalCode=560001, st=Karnataka, serialNumber=f89f88df29205bfdf422120f4c1e04f3323d5c514a0b37a32da5a409b8c06019, cn=VIJAY NELAMANGALA MUNIDALAPPA
Date: 2025.12.03 17:16:18 +05'30'